**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ 30-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No. 2427/2024

DW-2

| | | |
|---|---|---|
| ಸಾಕ್ಷಿದಾರರ ಹೆಸರು | - | ಪುಂಡಲೀಕ ರಾಮಪ್ಪಾ ನಾಯಕ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಒಕ್ಕಲುತನ |
| ಸಾಕೀನ | - | ತುಕ್ಕಾನಟ್ಟಿ |

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದ:**

1) ನನಗೆ ಪಿರ್ಯಾದುದಾರ ಹಾಗೂ ಆರೋಪಿಯ ಪರಿಚಯವಿದ್ದು, ಅವರಿಬ್ಬರೂ ತಮ್ಮಣ್ಣಗೌಡಾ ಶಂಕರಗೌಡಾ ಪಾಟೀಲ ಇವರ ತುಕ್ಕಾನಟ್ಟಿಯ ಜಮೀನಿನಲ್ಲಿ ಪಾಳೆ ನಾತೆಯಿಂದ ಉಳುಮೆ ಮಾಡಿದ್ದು ನಾನು ಸಹ ಅವರೊಂದಿಗೆ ಸದರಿ ರವರ ಜಮೀನನ್ನು ಪಾಳೆ ನಾತೆಯಿಂದ ಉಳುಮೆ ಮಾಡಿರುತ್ತೇನೆ. ಆರೋಪಿಯು ಸದರಿ ಜಮೀನಿನಲ್ಲಿ 2023 ರವರೆಗೆ ಒಟ್ಟು ನಾಲ್ಕು ವರ್ಷಗಳ ಪಾಳೆ ನಾತೆ ಉಳುಮೆ ಮಾಡಿದ್ದು, ಆ ಸಮಯದಲ್ಲಿ ತಮ್ಮಣ್ಣಗೌಡಾ ಶಂಕರಗೌಡಾ ಪಾಟೀಲ ರವರಿಗೆ ಪಾಳೆ ನಾತೆ ಉಳುಮೆಗೆ ಸಂಬಂಧಿಸಿದಂತೆ ಆಧಾರವಾಗಿ ಆರೋಪಿ ಒಂದು ಖಾಲಿ ಚೆಕ್ಕನ್ನು ನೀಡಿದ್ದು, ನಂತರ ಆರೋಪಿಯು ಸದರಿ ರವರ ಜಮೀನನ್ನು ಉಳುಮೆ ಮಾಡುವುದನ್ನು ಮುಂದುವರೆಸಲಿಲ್ಲ ಮತ್ತು ಸದರಿ ಪಡೆದ ಖಾಲಿ ಚೆಕ್ಕನ್ನು ತಮ್ಮಣ್ಣಗೌಡಾ ಶಂಕರಗೌಡಾ ಪಾಟೀಲ ರವರು ಆರೋಪಿಗೆ ಹಿಂದಿರುಗಿಸಲಿಲ್ಲ ಬದಲಾಗಿ ಪ್ರಸ್ತುತ

ಪಿರ್ಯಾದುದಾರರಿಂದ ಸದರಿ ತಮ್ಮಣ್ಣಗೌಡಾ ಶಂಕರಗೌಡಾ ಪಾಟೀಲ ರವರು ಸದರಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2) ಆರೋಪಿ ಹಾಗೂ ಪಿರ್ಯಾದುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರಲಿಲ್ಲ. ನಾವು ಮೂರು ಜನ ಸದರಿಯವರ ಜಮೀನನ್ನು ಪಾಳೆ ನಾತೆಯಿಂದ ಉಳುಮೆ ಮಾಡುವುದನ್ನು ಬಿಟ್ಟಿರುತ್ತೇವೆ. ಆರೋಪಿ ಸದರಿ ತಮ್ಮಣ್ಣಗೌಡಾ ಶಂಕರಗೌಡಾ ಪಾಟೀಲ ರವರ ಜೊತೆ ಮಾತ್ರ ವ್ಯವಹಾರವನ್ನು ಹೊಂದಿರುತ್ತಾರೆ. ಪ್ರಸ್ತುತ ಪಿರ್ಯಾದುದಾರನ ಯಾವುದೇ ಆಸ್ತಿ ಇರುವುದಿಲ್ಲ, ಅವರಿಗೆ ಆರೋಪಿಗೆ ಹಣ ನೀಡುವ ಸಾಮರ್ಥ್ಯವು ಇರುವುದಿಲ್ಲ.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದಃ**

1) ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ಪ್ರಸ್ತುತ ಪ್ರಕರಣವನ್ನು ಯಾರು ಯಾರ ವಿರುದ್ಧ, ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನನಗೆ ಆರೋಪಿ ಕರೆದಿರುವ ಕಾರಣ ಅವರ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ತಮಗೆ ಪ್ರಕರಣದ ವಿಷಯ ಗೊತ್ತಿರುವ ಕಾರಣ ಸಾಕ್ಷ್ಯ ನುಡಿಯಲು ಬಂದಿರುವುದಾಗಿ ನುಡಿಯುತ್ತಾರೆ. ನ್ಯಾಯಾಲಯದಿಂದ ಸಾಕ್ಷ್ಯ ನುಡಿಯಲು ನನಗೆ ಸಮನ್ಸ ಬಂದಿರುವುದಿಲ್ಲ.

2) ಆರೋಪಿ ಮತ್ತು ನಾನು ತುಕ್ಕಾನಟ್ಟಿಯ ಖಾಯಂ ವಾಸಿಯಾಗಿರುತ್ತೇವೆ ಎಂದರೆ ಸರಿ. ಪಿರ್ಯಾದುದಾರರು ಮೂಡಲಗಿ ತಾಲೂಕಿನ ಕಲ್ಲೋಳ್ಳಿ ಗ್ರಾಮದ ವಾಸಿಯಾಗಿರುತ್ತಾರೆ ಎಂದರೆ ಸರಿ. ಕಲ್ಲೋಳ್ಳಿ ಹಾಗೂ ತುಕ್ಕಾನಟ್ಟಿ ಗ್ರಾಮಗಳು ಅಕ್ಕಪಕ್ಕದಲ್ಲಿರುತ್ತವೆ ಎಂದರೆ ಸರಿ. ಅದೇ ರೀತಿ ಸದರಿ ಗ್ರಾಮಗಳ ಜಮೀನುಗಳು ಸಹ ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ಪಿರ್ಯಾದುದಾರ ನನಗೆ 2-3 ವರ್ಷಗಳಿಂದ ಪರಿಚಯವಿರುತ್ತಾರೆ. ನಾನು ತಮ್ಮಣ್ಣಗೌಡಾ ಶಂಕರಗೌಡಾ ಪಾಟೀಲ ರವರ ಜಮೀನನ್ನು ಪಾಳೆ ನಾತೆಯಿಂದ ಉಳುಮೆ ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ತಾವು ವಿಶ್ವಾಸದ ಮೇಲೆ ದಾಖಲೆ ಇಲ್ಲದೆ ಉಳುಮೆ ಮಾಡಿರುವುದಾಗಿ ನುಡಿಯುತ್ತಾರೆ. ಆರೋಪಿಯು ಸದರಿ ಪಾಟೀಲ ರವರಿಗೆ ಭದ್ರತೆಗಾಗಿ ಚೆಕ್ ನೀಡಿರುತ್ತಾರೆ ಎಂದು ಈ ಮೇಲೆ ಹೇಳಿರುವಂತೆ, ನಾನೂ ಸಹ ಉಳುಮೆ ಮಾಡಿದ್ದರೂ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ. ಆರೋಪಿ ಹಾಗೂ ಪಿರ್ಯಾದುದಾರರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ಪಿರ್ಯಾದುದಾರರು ಸುಮಾರು 7-8 ವರ್ಷಗಳಿಂದ ಪರಿಚಯವಿರುತ್ತಾರೆ. ಆರೋಪಿ ಸದರಿ ಪಾಟೀಲರವರಿಗೆ ನೀಡಿದ್ದರು ಎನ್ನಲಾಗುವ ಚೆಕ್ಕನ್ನು ಪಿರ್ಯಾದುದಾರ ದುರುಪಯೋಗ ಪಡಿಸಿಕೊಂಡಿರುತ್ತಾರೆ ಎನ್ನಲಾಗುವ ವಿಷಯ ನನಗೆ ಪ್ರಸ್ತುತ ಪ್ರಕರಣ ದಾಖಲಾದ ನಂತರ ತಿಳಿದಿರುತ್ತದೆ. ಸದರಿ ದುರುಪಯೋಗ ಪಡಿಸಿಕೊಂಡಿರುತ್ತಾರೆ ಎನ್ನಲಾಗುವ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನಾನು ಪಿರ್ಯಾದುದಾರರ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ನೋಡುವ ಸಂದರ್ಭ ಬಂದಿರುವುದಿಲ್ಲ. ನಾವು

ಸದರಿ ತಮ್ಮಣ್ಣಗೌಡಾ ಪಾಟೀಲ ರವರ ಜಮೀನನ್ನು ಪಾಳೆ ನಾತೆಯಿಂದ ಉಳುಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಆರೋಪಿಗೆ ಹಣ ನೀಡುವ ಸಾಮರ್ಥ್ಯ ಇರುವುದಿಲ್ಲ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಸದರಿ ಪಾಟೀಲ ರವರಿಗೆ ಭದ್ರತೆಗಾಗಿ ಖಾಲಿ ಚೆಕ್ಕನ್ನು ನೀಡಿದ್ದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಸದರಿ ಭದ್ರತೆಗಾಗಿ ನೀಡಿದ್ದರು ಎನ್ನಲಾಗುವ ಚೆಕ್ಕನಲ್ಲಿ ಸಹಿ ಮಾಡಿರಲಿಲ್ಲ.

3) ಆರೋಪಿ ನನಗೆ ನಾವೆಲ್ಲರೂ ಸೇರಿ ಸದರಿಯವರ ಜಮೀನನ್ನು ಉಳುಮೆ ಮಾಡಿದ ಕಾರಣದಿಂದ ಪರಿಚಯವಾಗಿರುತ್ತಾರೆ. ತುಕ್ಕಾನಟ್ಟಿ ಗ್ರಾಮವು ಚಿಕ್ಕ ಗ್ರಾಮವಾಗಿರುತ್ತದೆ ಎಂದರೆ ಸರಿ. ನಾವು ಜಮೀನನ್ನು ಉಳುಮೆ ಮಾಡುವ ಮೊದಲು ಆರೋಪಿಯ ಪರಿಚಯ ನನಗೆ ಇರಲಿಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಪಿರ್ಯಾದುದಾರನಿಂದ 2023 ರಲ್ಲಿ ಕುಟುಂಬ ಅಡಚಣೆಗಾಗಿ ರೂ. 4,00,000/- ಗಳನ್ನು ಪಡೆದು ಅದನ್ನು ಹಿಂದಿರುಗಿಸಲು ನಿಪಿ-1 ನ್ನು ನೀಡಿದ್ದ ಎಂದರೆ ಸರಿಯಲ್ಲ. ನಾನು ಹಾಗೂ ಆರೋಪಿ ಒಂದೇ ಊರಿನವರಾದ ಕಾರಣ, ಆರೋಪಿ ಹಾಗೂ ಪಿರ್ಯಾದುದಾರರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ, ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.